# ಮಹಾರಾಜರ ಚಟುವಟಿಕೆಗಳಿಗೆ ಸಾಕ್ಷಿಯಾದ ಸೌಭಾಗ್ಯ!



■ ಶ್ರೀಕರ ಎಲ್. ಭಂಡಾರಕರ್

ಅದ್ಭುತ ಇತಿಹಾಸವಿರುವ ಮೈಸೂರು ಮಹಾರಾಜರ ಬಗ್ಗೆ, ಅವರ ಎಲ್ಲ ಚಟುವಟಿಕೆಗಳನ್ನು ಸನಿಹದಿಂದ ನೋಡಿದಾಗ ಆದ ಖುಷಿ ಅಷ್ಟಿಷ್ಟಲ್ಲ. ಅವೆಲ್ಲವನ್ನೂ ನೆನಪಿನಂಗಳದಿಂದ ಮೊಗೆಮೊಗೆದು ಸವಿನೆನಪಾಗಿ ದಾಖಲಿಸುವುದು ಇನ್ನೂ ಪುಳಕ ಕೊಡುವ ವಿಚಾರ.

ನಾನು ಮೈಸೂರಿನ ಕೊನೆಯ ಮಹಾರಾಜ ಜಯಚಾಮರಾಜ ಒಡೆಯರ್ ಅವರ ಕಾಲದಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಇದ್ದು, ಆಗಾಗ ಅವರನ್ನು ಕಂಡ ನೆನಪುಗಳು ಅವಿಸ್ಮರಣೀಯ. ಅವರ ಇಬ್ಬರು ಮಕ್ಕಳನ್ನೂ ನೋಡಿದ್ದೆ.

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಯಾಗಿದ್ದಾಗ (1953–1955) ಒಡೆಯರ್ ಅವರ ಹಿರಿಯ ಪುತ್ರಿ ಗಾಯತ್ರಿದೇವಿ ಲಂಗ ತೊಟ್ಟು ಬಂದು, ರಾಮಕೃಷ್ಣ ಆಶ್ರಮದಲ್ಲಿ ಭಾಷಣ ಓದಿದ್ದರು. ಕಾಲಾನಂತರ ಅವರು ಅಕಾಲ ಸಾವಿಗೆ ತುತ್ತಾದಾಗ ಅಂತಿಮಯಾತ್ರೆಯಲ್ಲಿ ಒಡೆಯರ್ ಇದ್ದರು.

ವಿಶಾಲ ಮೈಸೂರು ರಾಜ್ಯ 1 ನವೆಂಬರ್ 1956ರಂದು ಮೂಡಿದಾಗ ಮೈಸೂರಿನಿಂದ ಬೆಂಗಳೂರಿಗೆ ಹೋಗಿ, ಸೆಂಟ್ರಲ್ ಕಾಲೇಜಿನ ಮೈದಾನದಲ್ಲಿಯ ಸಮಾರಂಭದಲ್ಲಿದ್ದೆ. ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್‌ರ ಜೊತೆ ಒಡೆಯರ್ ಇದ್ದರು. ಅಂದು ಜನರು ಸೇರಿದ್ದು ಕಡಿಮೆ. ಐತಿಹಾಸಿಕ ಘಟನೆ ಸರಳವಾಗಿತ್ತು.

ಅಂತೆಯೇ ಆಗ ಒಡೆಯರ್ ಅಧೀನದಲ್ಲಿದ್ದ ಮೈಸೂರಿನ ಲಲಿತ ಮಹಲ್ ಅರಮನೆಯಲ್ಲಿ ಒಂದು ತಿಂಗಳು ತಂಗಿದ್ದ ಡಾ. ರಾಜೇಂದ್ರ ಪ್ರಸಾದ್ ಒಂದು ಸಂಜೆ ಶ್ರೀ ರಾಮಕೃಷ್ಣ ಆಶ್ರಮಕ್ಕೆ ಬಂದು ಭಾಷಣ ಮಾಡಿದಾಗ ಹಾಜರಿದ್ದೆ. ಅವರು ದಿಲ್ಲಿಗೆ ತೆರಳುವ ಮುನ್ನ ಒಡೆಯರ್ ಅವರೊಡನೆ ಸಾರೋಟಿನಲ್ಲಿ ನಗರದ ಮುಖ್ಯ ರಸ್ತೆಗಳಲ್ಲಿ ಸಾಗಿದಾಗ ನೋಡಿದ್ದೆ. ಕೆಲವು ಸಂಜೆ ಅರಮನೆ ಹೆಬ್ಬಾಗಿಲಿನ ಬಳಿಯ ವೃತ್ತದಲ್ಲಿ ಕುಳಿತಾಗ ಒಡೆಯರ್ ರೋಲ್ಸ್ ರಾಯ್ಸ್ ಕಾರಿನಲ್ಲಿ ವಾಯುವಿಹಾರಕ್ಕಾಗಿ ಸಾಗುವುದನ್ನು ಕಂಡಿದ್ದೆ.

ದಸರಾ ಮೆರವಣಿಗೆಯಲ್ಲಿ ತಮ್ಮ ಪುತ್ರ ಶ್ರೀಕಂಠದತ್ತ ಒಡೆಯರ್ ಅವರನ್ನು ಹಿಂದೆ ಕೂರಿಸಿ ಅಂಬಾರಿಯಲ್ಲಿ ವಿರಾಜಮಾನರಾಗಿ ಒಡೆಯರ್ ಸಾಗಿದ ವೈಭವವನ್ನು ಕಣ್ತುಂಬಿಕೊಂಡಿದ್ದೆ. ದಸರಾ ಹಬ್ಬದ ಒಂದು ದಿನ ಅರಮನೆಯಲ್ಲಿ ಅವರ ದರ್ಬಾರಿನಲ್ಲಿ ಭಾಗಿಯಾಗಿದ್ದೆ. ಅರಮನೆಯ ಎದುರು ಕುಳಿತು ದರ್ಬಾರನ್ನು ಹಲವು ವರ್ಷ ವೀಕ್ಷಿಸಿದ್ದೆ.

ಬಿ.ಎ.ಪರೀಕ್ಷೆಯಲ್ಲಿ ಪತ್ರಿಕೋದ್ಯಮದಲ್ಲಿ ಪ್ರವೀಣನೆಂದು 1960ರ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಕುಲಾಧಿಪತಿ ಒಡೆಯರ್‌ರಿಂದ ಆಗಿನ ಏಕೈಕ ಎಂ.ವೆಂಕಟಕೃಷ್ಣಯ್ಯ ಬಹುಮಾನ ಪಡೆದ ಛಾಯಾಚಿತ್ರ ನೋಡಿ ನನ್ನ ಮಗ ಮಧುರ ಅದು ಹೇಗೆ ಸಿಕ್ಕಿತೆಂದು ಕೇಳಿದ್ದ. ನಾನು ವೃತ್ತಿಪರ ಛಾಯಾಗ್ರಾಹಕನಿಗೆ ಮುಂಚಿತವಾಗಿ ಹೇಳಿ ಅದನ್ನು ಗಿಟ್ಟಿಸಿದ್ದೆ. ಆ ಕ್ಷಣ ಇಂದಿಗೂ ನನ್ನನ್ನು ಹೆಮ್ಮೆ ಪಡಿಸುತ್ತಿದೆ.

ಆಚಾರ್ಯ ವಿನೋಬಾ ಬಾವೆಯವರು ಮೈಸೂರಿನಲ್ಲಿದ್ದಾಗ ಇಲವಾಲದ ಅತಿಥಿಗೃಹದಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂರನ್ನು ಭೇಟಿಯಾಗಲು ಒಡೆಯರ್ ಆಗಮಿಸಿ ಏಕಾಂಗಿಯಾಗಿ ಎದುರಿನಿಂದ ಬಂದಿದ್ದಕ್ಕೆ ಸಾಕ್ಷಿಯಾಗಿದ್ದೆ. ನಾನು 1960ರ ದಶಕದಲ್ಲಿ ಮಣಿಪಾಲದಲ್ಲಿದ್ದಾಗ ಮೈಸೂರಿನಲ್ಲಿ ನಡೆದ ರೋಟರಿ ಜಿಲ್ಲಾ ಸಮ್ಮೇಳನಕ್ಕೆ ಹೋದಾಗ ಒಡೆಯರ್ ಉದ್ಘಾಟಿಸಿದ್ದರು. ರಾಜ ಮನೆತನದ ಲಾಂಛನದೊಂದಿಗೆ ಅವರ ಭಾಷಣದ ಪ್ರತಿಗಳ ವಿತರಣೆಯಾಗಿತ್ತು. ಅವರ ಕಂಚಿನ ಕಂಠ ಮತ್ತು ಸ್ಪಷ್ಟ ಉಚ್ಚಾರ ಸಭಾಸದರನ್ನು ಮಂತ್ರಮುಗ್ಧರಾಗಿಸಿತ್ತು. ಆಗಾಗ ಚಪ್ಪಾಳೆ ಮೊಳಗಿತ್ತು. ಅಂದು ಸಂಜೆ ಉಪಾಹಾರ ಕೂಟದಲ್ಲೂ ಅವರು ಉಪಸ್ಥಿತರಿದ್ದಾಗ ಸಮೀಪ ದರ್ಶನ ಲಭಿಸಿತ್ತು.

ಅಂದು ಗಣ್ಯ ಅತಿಥಿ ಎಂದು ಒಡೆಯರ್ ಸಿಬ್ಬಂದಿಗೆ ಹಾರ ಹಾಕಲು ಆತಿಥೇಯರು ಮುಂದಾಗಿದ್ದ ಆಭಾಸವನ್ನು ಆ ಉದ್ಯೋಗಿ ತಪ್ಪಿಸಿದ್ದ! ಅವರ ಮುಖದ ಕಳೆ ಮತ್ತು ಗಾಂಭೀರ್ಯ ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತಿದ್ದವು.

ನಾನು 1970ರ ದಶಕಾರಂಭದಲ್ಲಿ ಮಾನಸ ಗಂಗೋತ್ರಿಯಲ್ಲಿ ಉಪನ್ಯಾಸಕನಿದ್ದಾಗ ಶ್ರೀಕಂಠದತ್ತರು ಸಮೀಪದ ಮೈದಾನದಲ್ಲಿ ಕ್ರಿಕೆಟ್ ಆಡುವುದನ್ನು ಗಮನಿಸುತ್ತಿದ್ದೆ. ಅವರು ಪರೀಕ್ಷೆ ಬರೆಯಲು ಮಸಿ ದೌತಿ ಮತ್ತು ಲೇಖನಿ ಬಳಸುತ್ತಿದ್ದುದನ್ನು ಉಸ್ತುವಾರಿಯಾಗಿ ಕಂಡಿದ್ದೆ. ಒಮ್ಮೆ ಅವರ ತರಗತಿಗೆ ಬಿಡುವಿದ್ದಾಗ ಹತ್ತಿರದ ನನ್ನ ಕೋಣೆಯ ಬಾಗಿಲಿಗೆ ಕೈಯೂರಿ ಸ್ವಲ್ಪ ಹೊತ್ತು ನನ್ನನ್ನು ಗಮನಿಸಿದ್ದರು.

ಒಡೆಯರ್ ಬೆಂಗಳೂರಿನ ಅರಮನೆಯಲ್ಲಿ ನಿಧನರಾದ ಆಕಾಶವಾಣಿ ಸುದ್ದಿ ಆ ನಗರದಲ್ಲೇ ಆಲಿಸಿದ್ದೆ. ಮೈಸೂರಿನಲ್ಲಿ ಅವರ ಅಂತ್ಯಕ್ರಿಯೆಯ ವಾರ್ತೆಯನ್ನೂ ಅಂದು ರಾತ್ರಿ ಪ್ರಸಾರ ಮಾಡಿತ್ತು. ಶ್ರೀಕಂಠದತ್ತರು ಅವರ ವಂಶದಲ್ಲಿ 60 ನೇ ಹುಟ್ಟುಹಬ್ಬ ಆಚರಿಸಿದ ದಾಖಲೆಯ ಬಳಿಕ ಇನ್ನಿಲ್ಲವಾದ ರೇಡಿಯೊ ವಾರ್ತೆಯನ್ನು ಬೆಂಗಳೂರಿನಲ್ಲಿ ಆಲಿಸಿದ್ದೆ. ಒಡೆಯರ್ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಇಷ್ಟೆಲ್ಲ ಅವರ ಸ್ಮರಣೆ ನನ್ನ ಸೌಭಾಗ್ಯ! ■